ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾಸ್ಟರ್ ಡಿಗ್ರಿಯಾಗಲೀ ಅಥವಾ ಯಾವುದೇ ಡಿಗ್ರಿಯಾಗಲೀ ಈ ರೀತಿ ಮಾರಾಟಕ್ಕೆ ಇಡುವಂಥಾದ್ದು ಭೂಷಣವಾದುದ್ದಲ್ಲ. ಇದನ್ನು ಸರ್ಕಾರ ಒಪ್ಪಲಾರದು. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಎಲ್ಲಾ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ವಿಶ್ವವಿದ್ಯಾನಿಲಯದ ಕುಲಪತಿಗಳ ಜೊತೆ ಮಾತನಾಡುತ್ತಾರೆ. ಮತ್ತು ಸರಿಯಾದ ಉತ್ತರವನ್ನು ಕಳುಹಿಸಿಕೊಡುತ್ತಾರೆ. ಮತ್ತು ಸದನಕ್ಕೂ ಕೂಡ ತಿಳಿಸುತ್ತಾರೆ.

ಪಿ.ಯು.ಸಿ. ವಿದ್ಯಾರ್ಥಿಗಳ ಮೌಲ್ಯಮಾಪನ ಸರಿಯಾದ ಸಮಯಕ್ಕೆ ನಡೆಯದೆ ಇರುವುದುದರಿಂದ ವಿದ್ಯಾರ್ಥಿಗಳಿಗೆ ತೊಂದರೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಲಕ್ಷಾಂತರ ಮಂದಿ ಪಿ.ಯು.ಸಿ ವಿದ್ಯಾರ್ಥಿಗಳ ಮೌಲ್ಯಮಾಪನವೇ ಆಗಿಲ್ಲ. ಮುಷ್ಕರ ನಡೆಯುತ್ತಾ ಇದೆ. 1995ನೇ ಇಸವಿಯಲ್ಲಿ ಮುಷ್ಕರ ಮಾಡಿದಾಗಲೇ ಮಾತುಕತೆ ಮಾಡಿ, ಇನ್ನು ಮೂರು ತಿಂಗಳಲ್ಲೇ ಪರಿಹಾರ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಆದರೆ, ಅವತ್ತಿನಿಂದ, ಇವತ್ತಿನವರೆಗೂ ಮಾತುಕತೆ ನಡೆದಿಲ್ಲ. ಅಧ್ಯಾಪಕರಿಗೂ ಮತ್ತು ಸರ್ಕಾರಕ್ಕೂ ನಡೆಯುತ್ತಿರತಕ್ಕ ಗೊಂದಲದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ತುಂಬಾ ನೋವನ್ನು ಅನುಭವಿಸುತ್ತಿದ್ದಾರೆ. ಅವರ ಮೆಡಿಕಲ್‌ಗೆ, ಇಂಜಿನಿಯರಿಂಗ್‌ಗೆ ಮತ್ತು ಅವರ ಭವಿಷ್ಯದ ಬಗ್ಗೆಯೇ ಒಂದು ರೀತಿ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂಬ ಭಾವನೆ ಇವತ್ತು ಇಡೀ ರಾಜ್ಯದಲ್ಲಿ ಜನತೆಯ ಮುಂದೆ ಇದೆ. ನೀವು ಅವರನ್ನು ಮಾತುಕತೆಗೆ ಕರೆಸಿ, ಸ್ವಾಭಾವಿಕವಾಗಿ ಅವರ ಏನು ಕೆಲವು ಸಮಸ್ಯೆಗಳು ಇವೆ ಅವುಗಳನ್ನು ನಿವಾರಿಸಿ. ಉದಾಹರಣೆಗೆ ಅಧ್ಯಕ್ಷರೇ, ನಿವೃತ್ತಿಯನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಿ ನೌಕರರಿಗೆ 15 ವರ್ಷ ಕೊಡುತ್ತಾರೆ ಖಾಸಗಿ ಶಿಕ್ಷಕರಿಗೆ 20 ವರ್ಷ ಕೊಡುತ್ತಾರೆ. ಇದರಲ್ಲಿ ಸ್ವಲ್ಪ ತಾರತಮ್ಯ ಇದೆ. ಈ ಸಮಸ್ಯೆಯನ್ನು ನಿವಾರಣೆ ಮಾಡಬೇಕೆನ್ನುವುದು ಅವರ ಒಂದು ಬೇಡಿಕೆ. ಮೆಡಿಕಲ್ ಬೆನಿಫಿಟ್ ಅಷ್ಟೇ ಅವರು ತಿಂಗಳಿಗೆ 25 ರೂಪಾಯಿಗಳನ್ನು ಕೇಳುತ್ತಿದ್ದಾರೆ. ಇದು ಸರ್ಕಾರಕ್ಕೆ ಒಂದು ದೊಡ್ಡ ಸಮಸ್ಯೆ ಎಂದು ನನಗೆ ಅನ್ನಿಸುವುದಿಲ್ಲ. ಅದೇ ರೀತಿ ಈ ಸರ್ಕಾರಿ ಆಜ್ಞೆಗಳನ್ನು ಹೊರಡಿಸಬೇಕಾದರೆ ಪ್ರೈವೇಟ್ ಕಾಲೇಜಿನವರಿಗೆ ಬೇರೆ ಖಾಸಗಿಯವರಿಗೆ ಬೇರೆ ಸರ್ಕಾರಿ ಶಿಕ್ಷಕರಿಗೆ ಬೇರೆ. ಇದು ಪ್ರೈವೇಟ್‌ನವರಿಗೂ ಮಾತ್ರ ಅನ್ವಯಿಸಬೇಕು ಎನ್ನುವ ರೀತಿ ಇದ್ದರೆ ಮಾತ್ರ ಅದು ಉಪಯೋಗವಾಗುತ್ತದೆ ಇಲ್ಲದಿದ್ದರೆ ಇಲ್ಲ. ಇದರಲ್ಲಿ ತಾರತಮ್ಯ ನಡೆಸುವಂತಹ ಪ್ರಯತ್ನ ನಡೆಯುತ್ತಿದೆ. ಈಗ ಇದರಿಂದ ಹಿಂಸೆ ಅನುಭವಿಸುತ್ತಿರುವುದು ವಿದ್ಯಾರ್ಥಿಗಳು ಮತ್ತು ಅವರ ತಂದೆತಾಯಿಗಳು. ಸರ್ಕಾರ ಏಕೆ ಈ ವಿಷಯದಲ್ಲಿ ಇಷ್ಟೊಂದು ಹಠಮಾರಿತನ ಮಾಡುತ್ತಿದೆಯೋ ಗೊತ್ತಾಗುತ್ತಿಲ್ಲ. ತಾವು 1995ನೇ ಇಸವಿಯಲ್ಲಿಯೇ ಹೇಳಿದ್ದಿರಿ ಅವರನ್ನು 3 ತಿಂಗಳಲ್ಲಿ ಕರೆಸಿ ಮಾತುಕತೆ ಮಾಡಿ ಮುಗಿಸುತ್ತೇವೆ ಎಂದು ತಾವು ಈಗ ಅವರನ್ನು ಮಾತುಕತೆಗೆ ಕರೆದು ಮುಗಿಸಿದರೆ ಮುಂದೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ತಕ್ಷಣ ಸರ್ಕಾರ ಅವರನ್ನು ಮಾತುಕತೆಗೆ ಕರೆಯಬೇಕು. ಈ ಒಂದು ವಿಧಾನ ಸಭೆಯ ಮೂಲಕ ಶಿಕ್ಷಕರಿಗೂ ಮತ್ತು ವಿದ್ಯಾರ್ಥಿಗಳಿಗೂ ಅವರ ತಂದೆ

ತಾಯಿಗಳಿಗೂ ಹೇಳಿದಂತೆ ಆಗುತ್ತದೆ. ತುರ್ತಾಗಿ ಅವರನ್ನು ಇವತ್ತು ನಾಳೆ ಒಳಗಾಗಿ ಮಾತುಕತೆಗೆ ಕರೆದು ಮಾತನಾಡುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮೌಲ್ಯಮಾಪನಗಳ ಸಂದರ್ಭದಲ್ಲಿ ಅಧ್ಯಾಪಕರು ಈ ರೀತಿಯಾಗಿ ವರ್ತಿಸುವಂಥಾದ್ದು ಕೂಡ ರಾಜ್ಯದ ಮಕ್ಕಳ ಹಿತದೃಷ್ಟಿಯಿಂದ ಮತ್ತು ಶಿಕ್ಷಕರ ಹಿತದೃಷ್ಟಿಯಿಂದಲೂ ಕೂಡ ಸಮಂಜಸವಲ್ಲ ಟ್ರೇಡ್ ಯೂನಿಯನ್ ರೀತಿಯಲ್ಲಿ ಅವರು ವರ್ತಿಸತಕ್ಕಂಥಾದ್ದು ಸರಿಯಲ್ಲ ಎಂದು ಸರ್ಕಾರ ಅವರಿಗೆ ಪದೇ ಪದೇ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದೆ. ಕೆಲವು ತಾಂತ್ರಿಕವಾದಂತಹ ವಿಷಯಗಳು ಏನಾದರೂ ಇದ್ದರೆ ಅವರ ನ್ಯಾಯ ಸಮ್ಮತವಾದಂತಹ ಬೇಡಿಕೆಗಳು ಏನಾದರೂ ಇದ್ದರೆ ಮಾನ್ಯ ಗೋವಿಂದೇಗೌಡರು ವಿಧಾನ ಪರಿಷತ್ತಿನಲ್ಲಿ ಈ ವಿಷಯ ಬಂದಾಗ ಉತ್ತರವನ್ನು ಕೊಟ್ಟಿದ್ದಾರೆ. ಈಗ ಮಾತುಕತೆಗೆ ನೇರವಾಗಿ ಅಲ್ಲದಿದ್ದರೂ ಕೂಡ ಬೇರೆಯವರ ಮೂಲಕ ಮಾತನಾಡಿರತಕ್ಕಂಥ ವಿಧಾನ ಪರಿಷತ್ತಿನಲ್ಲಿ ಅವರ ಪ್ರತಿನಿಧಿಗಳಾಗಿರತಕ್ಕಂಥವರ ಜೊತೆಯಲ್ಲಿ ಅವರು ಮಾತನಾಡಿದ್ದಾರೆ. ನಾನು ತಮ್ಮ ಭಾವನೆಗಳನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಮಾತನಾಡತಕ್ಕಂಥ ಪ್ರಯತ್ನ ಮಾಡುತ್ತೇನೆ. ಮತ್ತು ಸರ್ಕಾರ ಈ ವಿಷಯದಲ್ಲಿ ಸಂಪೂರ್ಣವಾದ ಕಾಳಜಿಯನ್ನು ಇಟ್ಟುಕೊಂಡಿದೆ. ವಿದ್ಯಾರ್ಥಿಗಳಿಗೆ ತೊಂದರೆಯಾಗತಕ್ಕಂಥ ಈ ಪರಿಪಾಠವನ್ನು ನಿಲ್ಲಿಸುವುದಕ್ಕೆ ತಮ್ಮೆಲ್ಲರ ಸಹಕಾರ ಅಗತ್ಯ ಎಂದು ನಾನು ಭಾವಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಅವರು ಟ್ರೇಡ್ ಯೂನಿಯನ್ ರೀತಿಯಲ್ಲಿ ವರ್ತಿಸುತ್ತಿದ್ದರೆ ಅದರ ಬಗ್ಗೆ ಎಷ್ಟರಮಟ್ಟಿಗೆ ತಾವು ಗಣನೆಗೆ ತೆಗೆದುಕೊಳ್ಳುತ್ತೀರೋ ಬಿಡುತ್ತೀರೋ ಅದು ತಮಗೆ ಬಿಟ್ಟಿದ್ದುದು. 1995ನೇ ಇಸವಿಯಲ್ಲಿ ನಿಮ್ಮ ಮತ್ತು ಅವರ ಮಧ್ಯೆ ಮಾತುಕತೆಯಾಗಿ 3 ತಿಂಗಳಲ್ಲಿ ಬಗೆಹರಿಸುತ್ತೇವೆಂದು ತಾವು ಒಪ್ಪಿಕೊಂಡಿದ್ದಿರಿ. ಮೂರು ತಿಂಗಳಲ್ಲಿ ಪರಿಹಾರ ಮಾಡುತ್ತೇವೆಂದು ಹೇಳಿ ಅವರಿಗೆ ಒಂದು ಅಧಿಕಾರ ಕೊಟ್ಟಿದ್ದುದು ನೀವೇ. ಏತಕ್ಕೆ ಕೊಟ್ಟಿರಿ ಆಗ? ಆಗಲೇ ತಾವು ಹಠ ಮಾಡಿಕೊಂಡು ಯಾವುದೇ ರೀತಿಯ ಮಾತುಕತೆ ಇಲ್ಲ, ನಿಮ್ಮ ಯಾವುದೇ ಬೇಡಿಕೆಗಳನ್ನು ನಾವು ಒಪ್ಪುವುದಿಲ್ಲ ಎಂದು ತಾವು ಆಗಲೇ ಹೇಳಬೇಕಾಗಿತ್ತು. ಆಗಲೇ ಹೇಳಿದ್ದರೆ ಈಗ ಅವರು ಕೇಳುವಂತಹ ಪ್ರಶ್ನೆ ಬರುತ್ತಿರಲಿಲ್ಲ ಮತ್ತು ಈಗೆ ಸ್ಟ್ರೈಕ್ ಮಾಡುವಂತಹ ಪ್ರಶ್ನೆಯೂ ಬರುತ್ತಿರಲಿಲ್ಲ. ಈಗ ಪ್ರಶ್ನೆ ಬಂದಿರತಕ್ಕಂಥಾದ್ದು ಆಗ ನೀವು ಮಾಡಿದಂತಹ ಒಂದು ತಪ್ಪಿನಿಂದ ನೀವು ಈಗ ಅವರನ್ನು ತಕ್ಷಣ ಮಾತುಕತೆಗೆ ಕರೆಯಿರಿ. ತಾವು ಸಹ ಕ್ಯಾಬಿನೆಟ್ ಸಚಿವರು ಇದ್ದೀರಿ. ಸರ್ಕಾರ ಇದೆ. ತಕ್ಷಣ ಅವನ್ನು ಮಾತುಕತೆಗೆ ಕರೆದು ಎಷ್ಟು ಸಾಧ್ಯವೋ ಅಷ್ಟು ಬೇಡಿಕೆಗಳನ್ನು ಈಡೇರಿಸಿ ವ್ಯಾಲ್ಯುಯೇಷನ್ ಮಾಡಿಸಿದರೆ ತಕ್ಷಣ ಮಕ್ಕಳ ಭವಿಷ್ಯಕ್ಕೆ ಒಂದು ಆಧಾರವಾದಂತೆ ಆಗುತ್ತದೆ. ತಾವು ಹಠ ಮಾರಿತನ ಮಾಡುವುದರಿಂದ ಮಕ್ಕಳು ಖಂಡಿತವಾಗಿ ಹಾಳಾಗುತ್ತಾರೆ. ಪೋಷಕರು ನಿಮ್ಮ ಮೇಲೆ ನಿಷ್ಠೂರವಾಗುತ್ತಾರೆ. ಮೆಡಿಕಲ್ ಮತ್ತು ಇಂಜಿನಿಯರಿಂಗ್‌ಗೆ ಹೋಗುವಂತಹ ವಿದ್ಯಾರ್ಥಿಗಳು ಹಾಳಾಗುತ್ತಾರೆ ಅದಕ್ಕೆ ಇವತ್ತು ಅಥವಾ ನಾಳೆಯೇ ಮಾತುಕತೆ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಬೇಕೆನ್ನುವ ಹೇಳಿಕೆಯನ್ನು ಸಹ ಮಾನ್ಯ ಶಿಕ್ಷಣ ಸಚಿವರು ಕೊಟ್ಟಿದ್ದಾರೆ. ಮಕ್ಕಳಿಗೆ ತೊಂದರೆಯಾಗದೇ ಇರುವಂತೆ ನೋಡಿಕೊಳ್ಳತಕ್ಕಂಥಾದ್ದು ಮತ್ತು ನ್ಯಾಯ ಸಮ್ಮತವಾಗಿರತಕ್ಕಂಥ ಬೇಡಿಕೆಗಳನ್ನು ಈಡೇರಿಸುವುದು ಸರ್ಕಾರದ ಕರ್ತವ್ಯ. ಆ ಕಾರಣಕ್ಕಾಗಿ ನಾವು ಈ ಕೆಲಸವನ್ನು ಮಾಡುತ್ತೇವೆ, ತಮ್ಮ ಸಲಹೆಯನ್ನು ಒಪ್ಪುತ್ತೇವೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ಮಾನಸಿಕವಾಗಿ ಹಿಂಸೆ ಪ್ರಾರಂಭವಾಗಿದೆ. ಒಂದು ತಿಂಗಳಾದರೂ ಇನ್ನೂ ವ್ಯಾಲ್ಯೂಯೇಷನ್ ಶುರುವಾಗಿಲ್ಲ. ಸರ್ಕಾರ ಇದೆಯೋ ಇಲ್ಲವೋ ಎನ್ನುವ ಅನುಮಾನ ಎಲ್ಲರಿಗೂ ಬರುತ್ತಿದೆ. ಅವರನ್ನು ಕರೆದು ಮಾತನಾಡುವ ಮನಸ್ಸು ತಾವು ಮಾಡಲಿಲ್ಲ ಅಂದರೆ ಹೇಗೆ?

ಅಧ್ಯಕ್ಷರು : ಚೈನಾ ದೇಶದವರು ನಮ್ಮ ಮೇಲೆ ಯುದ್ಧಕ್ಕೆ ಬಂದಾಗ ನಮ್ಮ ಜವಾನರು ಎಲ್ಲರೂ ನಮಗೆ ಸಂಬಳ ಹೆಚ್ಚು ಮಾಡಿ ಇಲ್ಲದಿದ್ದರೆ ನಾವು ಬಂದೂಕು ಕೈಗೆ ತೆಗೆದುಕೊಳ್ಳುವುದಿಲ್ಲ ಅಂದರೆ ಚೆನ್ನಾಗಿರುತ್ತದೆಯೇ? ಟೀಚರ್ಸನ್ನು ನಾವು ಆಚಾರ್ಯದೇವೋ ಭವ ಎಂದು ಕರೆಯುತ್ತೇವೆ. ಇದನ್ನು ಒಂದು ತಂತ್ರ ಮಾಡಿಕೊಂಡು ಮಾಡುತ್ತಾರೆ. ನೀವು ಹೇಳತಕ್ಕಂಥಾದ್ದು ಸಮಸ್ಯೆ ಆಗುತ್ತದೆ ನಿಜ. ನಾವು ಜನ ಪ್ರತಿನಿಧಿಗಳು ಅಲ್ಲವೇ? ಪ್ರತಿ ಸಲ ಅವರು ಈ ರೀತಿ ಮಾಡಿಕೊಂಡರೆ ಹೇಗೆ. ರೋಗಿಯನ್ನು ಓ.ಟಿಯಲ್ಲಿಟ್ಟು ಟೂಲ್ಸ್ ಪಕ್ಕಕ್ಕೆ ಇಟ್ಟು ಡಾಕ್ಟರ್ಸ್ ಸ್ಟ್ರೈಕ್ ಮಾಡುವುದು. ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಬಂದಾಗ ಪೊಲೀಸಿನವರು ಕೇಸ್ ಬಿಸಾಕಿ ಅವರು ಸ್ಟ್ರೈಕ್ ಮಾಡುವುದು, ಪೇಪರ್ ವ್ಯಾಲ್ಯೂವೇಶನ್ ಬಂದಾಗ ಅಧ್ಯಾಪಕರು ಸ್ಟ್ರೈಕ್ ಮಾಡುವುದು ಅಂದರೆ ಸಂಘಟಿತರಾಗಿರತಕ್ಕಂಥವರು ಅಸಂಘಟಿತರಾಗಿರತಕ್ಕಂಥವರನ್ನು ಬ್ಲಾಕ್‌ಮೇಲ್ ಮಾಡುವಂಥಾದ್ದು. Can we be a party for this? The problem will have to be solved.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾಮಂತ್ರಿಗಳೂ ಕೂಡ ಹೇಳಿದ್ದಾರೆ. ದಯಮಾಡಿ ಶಿಕ್ಷಣದ ಹಿತದೃಷ್ಟಿಯಿಂದ ಮತ್ತು ಮಕ್ಕಳ ಹಿತದೃಷ್ಟಿಯಿಂದ ತಮ್ಮ ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಳ್ಳಿ ಮಾತುಕತೆಗೆ ಬನ್ನಿ ಎಂದು ಹೇಳಿದ್ದಾರೆ. ಇದು ಪ್ರತಿಷ್ಠೆಯ ಪ್ರಶ್ನೆ ಅಲ್ಲ. ಆದರೆ ಈ ತರಹದಲ್ಲಿ they cannot hold the Government to ransom. ಅದೂ ಆಯಾಯಾ ಸಂದರ್ಭದಲ್ಲಿ ಕುಳಿತುಕೊಂಡು ಮಾನ್ಯ ಅಧ್ಯಕ್ಷರು ಸೂಚಿಸಿದಂತೆ ತಾವೂ ಕೂಡ ಅವರಿಗೆ ಹಿತವಚನವನ್ನು ಹೇಳಿ ಮೌಲ್ಯಮಾಪನ ಮಾಡುವುದಕ್ಕೆ ಬರುವುದಕ್ಕೆ ನಾನೂ ಸಹ ಈ ಸದನದ ಮೂಲಕ ಅವರಲ್ಲಿ ವಿಜ್ಞಾಪನೆಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಒಪ್ಪುತ್ತೇನೆ. ಈ ಸದನದ ಮೂಲಕ ನಾನು ಅಧ್ಯಾಪಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ತೀರಾ ಅವರು ಹಠ ಹಿಡಿಯುವುದು ಬೇಡ. ಸರ್ಕಾರ ಕೂಡ ಹಠ ಹಿಡಿಯುವುದು ಬೇಡ. 1995ನೇ ಇಸವಿಯಲ್ಲಿ ಇದೇ ಸರ್ಕಾರ ಅವರಿಗೆ ಭರವಸೆ ಕೊಟ್ಟಿದೆ ಮೂರು ತಿಂಗಳಲ್ಲಿ ಮಾತುಕತೆ ಮಾಡಿ ಬಗೆಹರಿಸುತ್ತೇವೆಂದು ಇದು ಈಗ ಸಮಸ್ಯೆ ಆಗಿರುವುದು. ಮಾತುಕತೆಗೆ ಕರೆದರೆ ಈ ಸಮಸ್ಯೆ ಬಗೆಹರಿಯುತ್ತದೆ.

ಅಧ್ಯಕ್ಷರು : ನಾನು ಅವರನ್ನು ಟೀಕೆ ಮಾಡುತ್ತಿಲ್ಲ. ಅವರು ನಮ್ಮ ಸಹೋದರ ಸಹೋದರಿಯರು ಇದ್ದಾರೆ. ಅವರ ಸಮಸ್ಯೆಗಳ ಬಗ್ಗೆ ಕೂಡ ನಾವೇ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಆದರೆ ಪ್ರತಿ ಸಲ ಶಿಕ್ಷಕರ ಸಮೂಹದಿಂದ ಇದು ಒಳ್ಳೆಯ ಪ್ರವೃತ್ತಿಯಾಗುವುದಿಲ್ಲ ಅಷ್ಟೇ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ತಮ್ಮ ಮಾತನ್ನು ನಾನು ಒಪ್ಪುತ್ತೇನೆ. ಅವರು ಈ ರೀತಿ ಮಾಡಬಾರದು ಎನ್ನುವ ಬಗ್ಗೆ ನನ್ನ ಸಹಮತ ಇದೆ. ಈ ಸಂದರ್ಭದಲ್ಲಿ ಮಕ್ಕಳ ಸ್ಥಿತಿ ಏನಾಗಿದೆ? ಪಾಲಕರ ಸ್ಥಿತಿ ಏನಾಗಿದೆ ಇದು ನಮಗೆ ಚಿಂತನೆಗೆ ಈಡಾಗಿರುವುದು.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ನಾವು ಹೇಳುತ್ತಿರುವುದು ಮಾತುಕತೆ ಮಾಡಿ ಎಂದು. ಆದರೆ ಅವರ ಎಲ್ಲಾ ಬೇಡಿಕೆಗಳು ಸರಿಯಾಗಿವೆ ಅವುಗಳೆಲ್ಲವನ್ನೂ ತಾವು ಒಪ್ಪುತ್ತೀರಿ ಎಂಬ ವಿಶ್ವಾಸ ನನಗೂ ಇಲ್ಲ. ಆದರೆ ಮಾತುಕತೆ ಮಾಡಿ ಎಷ್ಟಾದರೆ ಅಷ್ಟು ಮುಗಿಸಿ.

ಶ್ರೀ ಎಂ.ಪಿ. ಪ್ರಕಾಶ್ : ಮಾತುಕತೆ ಮಾಡುವುದಕ್ಕೆ ಸರ್ಕಾರ ಯಾವಾಗಲೂ ಕೂಡ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳುವುದಿಲ್ಲ. ಅವರು ಸತ್ಯಾಗ್ರಹ ವಾಪಸ್ಸು ತೆಗೆದುಕೊಳ್ಳಲಿ ಮಾತುಕತೆಗೆ ಒಂದು ಒಳ್ಳೆಯ ವಾತಾವರಣ ಸೃಷ್ಟಿಯಾಗುತ್ತದೆ ಆಗ ಮಾತುಕತೆ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಪ್ರತಿಷ್ಠೆ ನೋಡಿ. ನೀವು ಪ್ರತಿಷ್ಠೆ ಮಾಡಿಕೊಳ್ಳುವುದು ಅವರೂ ಪ್ರತಿಷ್ಠೆ ಮಾಡಿಕೊಳ್ಳುವುದರಿಂದ ಮಕ್ಕಳ ಭವಿಷ್ಯ ಹಾಳಾಗುತ್ತಿದೆ.

ಅಧ್ಯಕ್ಷರು : ಉಭಯತರರು ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳುವುದು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, 1995ನೇ ಇಸವಿಯಲ್ಲಿ ತಾವು ಮೂರು ತಿಂಗಳಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಹೇಳಿದಿರಿ. ಆದ್ದರಿಂದ ತಾವು ಈಗ ಪ್ರತಿಷ್ಠೆಯನ್ನು ಸ್ವಲ್ಪ ಕಡಿಮೆ ಮಾಡಿಕೊಂಡು ಮಾತುಕತೆಗೆ ಕರೆಯಿರಿ. ಮಕ್ಕಳ ಹಿತದೃಷ್ಟಿಯಿಂದ ಅವರನ್ನು ಮಾತುಕತೆಗೆ ಕರೆಯಿರಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಯು.ಜಿ.ಸಿ. ವಿಚಾರ ಆಗಿರಬಹುದು ಅವರ ಬಡ್ತಿ ವಿಷಯಗಳು ಆಗಿರಬಹುದು, ವೇತನ ಮತ್ತು ಜೇಷ್ಠತೆಯ ಆಧಾರದ ವಿಷಯಗಳು ಆಗಿರಬಹುದು, ಸರ್ಕಾರ ಯಾವಾಗಲೂ ನ್ಯಾಯ ಸಮ್ಮತವಾಗಿರತಕ್ಕಂಥ ನಿರ್ಣಯ ತೆಗೆದುಕೊಳ್ಳುತ್ತದೆ. ಅವರ ಬಗ್ಗೆ ಗೌರವ ಇದೆ. ಅವರು ಸತ್ಯಾಗ್ರಹ ವಾಪಸ್ಸು ತೆಗೆದುಕೊಳ್ಳಲಿ ಈ ಸದನದ ಮೂಲಕ ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಯು.ಕೆ.ಪಿ ಕೆಲಸ ಕಾರ್ಯಗಳು ಸ್ಥಗಿತಗೊಂಡಿರುವುದು

ಶ್ರೀ ಎಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ನಮಗೆ ಒಂದು ಅನುಮಾನವಾಗಿದೆ. ಇದರಲ್ಲಿ ಏನಾದರೂ ಕಾನ್ಸಿಪಿರೆಸ್ಸಿ ಇದೆಯಾ ಅಂತ. ಕರ್ನಾಟಕದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಕೆಲಸ ನಿಂತು ಹೋಗಬೇಕು ಎನ್ನತಕ್ಕಂಥ ಆಂಧ್ರಪ್ರದೇಶಕ್ಕೆ